# ಭಾರತದಲ್ಲಿ ಮಕ್ಕಳ ಕಳ್ಳಸಾಗಣೆ

INSTAKAS

**ಇದೀಗ ಸುದ್ದಿಯಲ್ಲಿದೆ:**
**ಭಾರತದಲ್ಲಿ ಬಲವಾದ ಸಾಂವಿಧಾನಿಕ ಚೌಕಟ್ಟು ಮತ್ತು ಅನೇಕ ಶಾಸನಬದ್ಧ ರಕ್ಷಣೆಗಳಿದ್ದರೂ, ಮಕ್ಕಳ ಕಳ್ಳಸಾಗಣೆಯು ಗಂಭೀರ ಮಾನವ ಹಕ್ಕುಗಳ ಸವಾಲಾಗಿ ಮುಂದುವರೆದಿದ್ದು ಕಳವಳಕಾರಿ ಸಂಗತಿಯಾಗಿದೆ.**

## ಮಕ್ಕಳ ಕಳ್ಳಸಾಗಣೆ:

**BNS, 2023 ರ ಸೆಕ್ಷನ್ 143 'ಕಳ್ಳಸಾಗಣೆ'ಯನ್ನು ವ್ಯಾಖ್ಯಾನಿಸುತ್ತದೆ:-** ಶೋಷಣೆಗಾಗಿ ವ್ಯಕ್ತಿಗಳ ನೇಮಕಾತಿ, ಸಾಗಾಣಿಕೆ, ಆಶ್ರಯ ನೀಡುವಿಕೆ, ವರ್ಗಾವಣೆ ಅಥವಾ ಸ್ವೀಕೃತಿಯನ್ನು 'ಕಳ್ಳಸಾಗಣೆ' ಎಂದು ವ್ಯಾಖ್ಯಾನಿಸಲಾಗಿದೆ

**ಈ ವಿಧಾನಗಳನ್ನು ಕಳ್ಳಸಾಗಣೆ ಒಳಗೊಂಡಿದೆ:- ಬೆದರಿಕೆಗಳು, ಬಲವಂತ, ಒತ್ತಾಯ, ಅಪಹರಣ, ವಂಚನೆ, ಮೋಸ, ಅಧಿಕಾರ ದುರ್ಬಳಕೆ ಅಥವಾ ಆಮಿಷ ಒಡ್ಡುವಂತಹುದು.**

**ಶೋಷಣೆಯ ವ್ಯಾಪ್ತಿ:- ದೈಹಿಕ ಮತ್ತು ಲೈಂಗಿಕ ಶೋಷಣೆ, ಗುಲಾಮಗಿರಿ, ದಾಸ್ಯ, ಬಲವಂತದ ದುಡಿಮೆ ಹಾಗೂ ಬಲವಂತವಾಗಿ ಅಂಗಾಂಗಗಳನ್ನು ತೆಗೆಯುವುದನ್ನು** ಇದು ಒಳಗೊಂಡಿದೆ.

## ಭಾರತದಲ್ಲಿ ಸಾಂವಿಧಾನಿಕ ರಕ್ಷಣೆಗಳು:

**ವಿಧಿ 21:-** ಇದು "ಜೀವಿಸುವ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕ"ನ್ನು ಖಚಿತಪಡಿಸುತ್ತದೆ. ಇದು **ಘನತೆಯಿಂದ ಜೀವಿಸುವ ಹಕ್ಕನ್ನು** ಒಳಗೊಂಡಿದೆ ಎಂದು ಅರ್ಥೈಸಲಾಗಿದೆ.

**ವಿಧಿ 23:-** ಇದು **ಮಾನವರ ಕಳ್ಳಸಾಗಣೆ ಮತ್ತು ಬಲವಂತದ ದುಡಿಮೆಯನ್ನು ನಿಷೇಧಿಸುತ್ತದೆ.**

**ವಿಧಿ 24:-** ಇದು **14 ವರ್ಷದೊಳಗಿನ ಮಕ್ಕಳನ್ನು ಅಪಾಯಕಾರಿ ಕೈಗಾರಿಕೆಗಳಲ್ಲಿ** ನೇಮಿಸಿಕೊಳ್ಳುವುದನ್ನು ನಿಷೇಧಿಸುತ್ತದೆ.

**ವಿಧಿ 39(e):- ಕಾರ್ಮಿಕರ ಮತ್ತು ಮಕ್ಕಳ ಆರೋಗ್ಯ ಹಾಗೂ ಶಕ್ತಿಯನ್ನು ದುರುಪಯೋಗಪಡಿಸಿಕೊಳ್ಳದಂತೆ ಮತ್ತು ನಾಗರಿಕರು ತಮ್ಮ ವಯಸ್ಸು ಅಥವಾ ಶಕ್ತಿಗೆ ಸೂಕ್ತವಲ್ಲದ ಉದ್ಯೋಗಗಳನ್ನು ಮಾಡಲು ಒತ್ತಾಯಿಸಲ್ಪಡದಂತೆ ರಾಜ್ಯವು ಖಚಿತಪಡಿಸಿಕೊಳ್ಳಬೇಕು.**

**ವಿಧಿ 39(f):- ಮಕ್ಕಳು ಸ್ವಾತಂತ್ರ್ಯ ಮತ್ತು ಘನತೆಯ ಪರಿಸ್ಥಿತಿಗಳಲ್ಲಿ ಬೆಳೆಯಲು ಅವಕಾಶಗಳನ್ನು ಕಲ್ಪಿಸಬೇಕು ಮತ್ತು ನೈತಿಕ ಹಾಗೂ ಭೌತಿಕ ಪರಿತ್ಯಾಗದಿಂದ ರಕ್ಷಣೆ ನೀಡಬೇಕು** ಎಂದು ಇದು ಆದೇಶಿಸುತ್ತದೆ.

## ಮಕ್ಕಳ ಕಳ್ಳಸಾಗಣೆ ವಿರುದ್ಧ ನ್ಯಾಯಾಂಗದ ಮಧ್ಯಸ್ಥಿಕೆ:

- **ವಿಶಾಲ್ ಜೀತ್ v/s ಭಾರತ ಒಕ್ಕೂಟ (1990):-** ಈ ಪ್ರಕರಣದಲ್ಲಿ, **ಕಳ್ಳಸಾಗಣೆ ಮತ್ತು ಮಕ್ಕಳ ವೇಶ್ಯಾವಾಟಿಕೆ ಗಂಭೀರ ಸಾಮಾಜಿಕ-ಆರ್ಥಿಕ ಸಮಸ್ಯೆಗಳಾಗಿವೆ.** ಆದ್ದರಿಂದ ಅವುಗಳನ್ನು ಎದುರಿಸಲು ತಡೆಗಟ್ಟುವ ಮತ್ತು **ಮಾನವೀಯ ವಿಧಾನ** ಅತ್ಯಗತ್ಯ ಎಂದು ಘನ ನ್ಯಾಯಾಲಯ ಹೇಳಿದೆ.
- **ಎಂ. ಸಿ. ಮೆಹ್ತಾ v/s ತಮಿಳುನಾಡು ರಾಜ್ಯ (1996):- ಅಪಾಯಕಾರಿ ಕೈಗಾರಿಕೆಗಳಲ್ಲಿ** ಮಕ್ಕಳನ್ನು ನೇಮಿಸಿಕೊಳ್ಳುವುದನ್ನು ನಿಷೇಧಿಸುವ ಉದ್ದೇಶದಿಂದ ಘನ ನ್ಯಾಯಾಲಯವು **ಮಾರ್ಗಸೂಚಿಗಳನ್ನು** ಹೊರಡಿಸಿತು.
- **ಬಚ್‌ಪನ್ ಬಚಾವೋ ಆಂದೋಲನ್ v/s ಭಾರತ ಒಕ್ಕೂಟ (2011):-** ಮಕ್ಕಳ **ವ್ಯಾಪಕ ಶೋಷಣೆ ಮತ್ತು ಕಳ್ಳಸಾಗಣೆಯನ್ನು ಪರಿಹರಿಸಲು** ಸರ್ವೋಚ್ಚ ನ್ಯಾಯಾಲಯ ನಿರ್ದೇಶನಗಳನ್ನು ನೀಡಿತು.
- **ಕೆ. ಪಿ. ಕಿರಣ್ ಕುಮಾರ v/s ಕರ್ನಾಟಕ ರಾಜ್ಯ:-** ಸರ್ವೋಚ್ಚ ನ್ಯಾಯಾಲಯವು ಅಂತಹ ಅಪರಾಧಗಳನ್ನು ತಡೆಗಟ್ಟಲು **ಕಠಿಣ ಮಾರ್ಗಸೂಚಿಗಳನ್ನು** ನೀಡಿದೆ. ಕಳ್ಳಸಾಗಣೆಯು ಸಂವಿಧಾನವು ಖಾತರಿಪಡಿಸಿದ ಮಕ್ಕಳ **ಜೀವಿಸುವ ಮೂಲಭೂತ ಹಕ್ಕನ್ನು**

## ಮಾನವ ಕಳ್ಳಸಾಗಣೆ ವಿರೋಧಿ ಅಪರಾಧಗಳನ್ನು ನಿಯಂತ್ರಿಸುವ ಕಾನೂನುಗಳು:

**ಅನೈತಿಕ ಕಳ್ಳಸಾಗಣೆ (ತಡೆಗಟ್ಟುವಿಕೆ) ಕಾಯ್ದೆ, 1956:-** ಇದು ಅನೈತಿಕ ಕಳ್ಳಸಾಗಣೆ ಮತ್ತು **ಲೈಂಗಿಕ ಕೆಲಸವನ್ನು** ತಡೆಯುವ ಗುರಿಯನ್ನು ಹೊಂದಿದೆ. ಇದು 1978 ಮತ್ತು 1986 ರಲ್ಲಿ ಎರಡು ತಿದ್ದುಪಡಿಗಳಿಗೆ ಒಳಪಟ್ಟಿದೆ.

**ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986:-** ಇದು ಮಕ್ಕಳನ್ನು ಕೆಲವು ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳದಂತೆ ತಡೆಯುತ್ತದೆ ಮತ್ತು ಇತರ ಕ್ಷೇತ್ರಗಳಲ್ಲಿ ಮಕ್ಕಳ ಕೆಲಸದ ಪರಿಸ್ಥಿತಿಗಳನ್ನು ನಿಯಂತ್ರಿಸುತ್ತದೆ.

**ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನೆ) ಕಾಯ್ದೆ, 1976:- ಸಾಲ ತೀರಿಸಲು ಮಕ್ಕಳು ಸೇರಿದಂತೆ ಜನರು ದಾಸ್ಯದ ಪರಿಸ್ಥಿತಿಗಳಲ್ಲಿ** ಕೆಲಸ ಮಾಡುವ ಪದ್ಧತಿಯನ್ನು ಇದು ನಿಷೇಧಿಸುತ್ತದೆ. ಜೀತಪದ್ಧತಿಯಿಂದ ಬಿಡುಗಡೆಗೊಂಡ ಕಾರ್ಮಿಕರ **ಪುನರ್ವಸತಿಗಾಗಿ** ಚೌಕಟ್ಟನ್ನು ಸಹ ಒದಗಿಸುತ್ತದೆ.

**ಬಾಲಾಪರಾಧಿ ನ್ಯಾಯ (ಮಕ್ಕಳ ರಕ್ಷಣೆ ಮತ್ತು ಪೋಷಣೆ) ಕಾಯ್ದೆ, 2015:-** ಇದು ಕಾನೂನಿನ ಸಂಘರ್ಷದಲ್ಲಿರುವ ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳನ್ನು ನಿರ್ವಹಿಸುತ್ತದೆ.

**ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (POCSO) ಕಾಯ್ದೆ, 2012:-** ಇದು ಮಕ್ಕಳ **ವಾಣಿಜ್ಯಕ ಲೈಂಗಿಕ ಶೋಷಣೆಯನ್ನು ತಡೆಯಲು** ಪ್ರಯತ್ನಿಸುತ್ತದೆ.